# ನಗರಸಭೆ ಕಾರ್ಯಾಲಯ ಗಂಗಾವತಿ

ಸಂ/ನಸಗಂ/ಕಾಮಗಾರಿ/ಎಸ್‌ಎಫ್‌ಸಿ-ಶೇ.22.75%/ಮನೀಕೊ/09-10 . ದಿನಾಂಕ:-23-02-2010

## -:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

2009-10ನೇ ಸಾಲಿನ ಎಸ್.ಎಫ್.ಸಿ. ಶೇ.22.75%ರ ಅನುದಾನ. ನಗರಸಭೆ ನಿಧಿಯ ಶೇ.22.75% ರ ಪ.ಜಾತಿ/ಪ.ಪಂಗಡದ ಜನತೆಯ ಕಲ್ಯಾಣ ಕಾರ್ಯಕ್ರಮದಲ್ಲಿ ಮತ್ತು 2008-09ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಅಡಿಯಲ್ಲಿ ಈ ಕೆಳಗಿನ ಕಾಮಗಾರಿಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಸೂಕ್ತ ದರ್ಜೆಯ ಗುತ್ತಿಗೆದಾರರಿಂದ ನಿಗಧಿತ ನೊಂದಾಯಿಸಿರುವ ಫಾರಂಗಳಲ್ಲಿ ನಿಗಧಿತ ಕೆ.ಡಬ್ಲು-1 ಮತ್ತು 2 ಫಾರಂಗಳಲ್ಲಿ (ದ್ವಿಪ್ರತಿಗಳಲ್ಲಿ) ಮೊಹರ್‌ಬಂದ್ ಮಾಡಿದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| | | |
|---|---|---|
| 1] | ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 09-03-2010<br>ಸಂಜೆ 5.00 ರವರೆಗೆ |
| 2] | ಟೆಂಡರ್ ಫಾರಂಗಳನ್ನು ನೀಡಲು ಕೊನೆಯ ದಿನಾಂಕ | 11-03-2010 |
| 3] | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ದಿನಾಂಕ ಮತ್ತು ಸಮಯ | 12-03-2010<br>ಸಂಜೆ 4.30 ರವರೆಗೆ |
| 4] | ಟೆಂಡರ್‌ಗಳನ್ನು ತೆರೆಯುವ ಸ್ಥಳ ಮತ್ತು ದಿನಾಂಕ | ಪೌರಾಯುಕ್ತರ ಕಛೇರಿ, ದಿ:-12.03.2010 ಸಂಜೆ 5.00 ಗಂಟೆಗೆ ಅಥವಾ ಮರುದಿನ ರಜೆ ಇದ್ದಲ್ಲಿ ಪರ್ಯಾಯ ದಿನವನ್ನು ಗೊತ್ತುಪಡಿಸಲಾಗುವುದು. |

| ಕ್ರ. ಸಂ. | ಕಾಮಗಾರಿಗಳ ವಿವರ | ಪ್ಯಾಕೇಜ್ ಮೊತ್ತ (ರೂ.ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ (ಇ.ಎಂ.ಡಿ.) | ಖಾಲಿ ಟೆಂಡರ್ ನಮೂನೆ ಶುಲ್ಕ+ತೆರಿಗೆ | ಗುತ್ತೇದಾರರ ದರ್ಜೆ | ಕೆಲಸ ಮಾಡಲು ನಿಗದಿಪಡಿಸಿದ ಅವಧಿ |
|---|---|---|---|---|---|---|
| | ***ಪ್ಯಾಕೇಜ್ ಸಂ:-01*** | | | | | |
| 1. | ವಾ.ನಂ:1 ರಲ್ಲಿ ಭೋವಿ ಸಮಾಜದ ಚಟುವಟಿಕೆಗೆ ಅಂಬೇಡಕರ ಭವನ ನಿರ್ಮಾಣ ಅಂದಾಜುಮೊತ್ತ ರೂ.2.00 ಲಕ್ಷ | | | | | |
| 2. | ವಾ.ನಂ:2 ರಲ್ಲಿ ಜಂಡಾಕಟ್ಟೆಯಿಂದ ವಾಲ್ಮೀಕಿ ಸರ್ಕಲ್‌ವರೆಗೆ ಚರಂಡಿ ಅಂದಾಜುಮೊತ್ತ ರೂ.2.50 ಲಕ್ಷ | | | | | |
| 3. | ವಾ.ನಂ:3 ರಲ್ಲಿ ಪ.ಪಂಗಡದವರಿಗೆ ಅಂಬೇಡಕರ ಭವನಕ್ಕೆ ಮುಂದುವರೆದ ಕಾಮಗಾರಿ ಅಂದಾಜುಮೊತ್ತ ರೂ.1.50 ಲಕ್ಷ | | | | | |
| 4. | ವಾ.ನಂ:18 ಗಾಂಧಿನಗರದಲ್ಲಿ ಅಂಬೇಡಕರ ಭವನ ನಿರ್ಮಾಣ ಅಂದಾಜುಮೊತ್ತ ರೂ.3.50 ಲಕ್ಷ | | | | | |
| 5. | ವಾ.ನಂ:20ರಲ್ಲಿ ನೇತ್ರಾ ರಮೇಶ ಮನೆಯಿಂದ ಹಾಲಿನ ಡೈರಿವರೆಗೆ ಸಿ.ಸಿ. ರಸ್ತೆ. ಅಂದಾಜುಮೊತ್ತ ರೂ.2.50 ಲಕ್ಷ | | | | | |
| 6. | ವಾ.ನಂ:23 ರಲ್ಲಿ ಅಂಬೇಡಕರನಗರದಲ್ಲಿ ಸಿ.ಸಿ. ಚರಂಡಿ ನಿರ್ಮಾಣ ಅಂದಾಜುಮೊತ್ತ ರೂ.2.50 ಲಕ್ಷ | | | | | |
| 7. | ವಾ.ನಂ:27ರಲ್ಲಿ ಅಂಬೇಡಕರ ಭವನದ ಮುಂದುವರೆದ ಕಾಮಗಾರಿ ಅಂದಾಜುಮೊತ್ತ ರೂ.3.50 ಲಕ್ಷ | | | | | |
| 8. | ವಾ.ನಂ:28 ರ ಚಲುವಾದಿವಾಡದಲ್ಲಿ ಸಿ.ಸಿ. ಚರಂಡಿ ಅಂದಾಜುಮೊತ್ತ ರೂ.3.50 ಲಕ್ಷ | | | | | |
| 9. | ವಾ.ನಂ:31 ರಲ್ಲಿ ಬ್ರಹ್ಮಯ್ಯನ ಮನೆಯಿಂದ ಭವಾನಿಯಮ್ಮ ಮನೆಯವರೆಗೆ ಸಿ.ಸಿ. ರಸ್ತೆ ಅಂದಾಜುಮೊತ್ತ ರೂ.1.50 ಲಕ್ಷ | | | | | |
| 10. | ವಾ.ನಂ:30 ರಲ್ಲಿ ವಡ್ಡರ ಓಣಿಯಲ್ಲಿ ಸಿ.ಸಿ.ರಸ್ತೆ ನಿರ್ಮಾಣ. ಅಂದಾಜುಮೊತ್ತ ರೂ.2.50 ಲಕ್ಷ | | | | | |
| | | 25.50 | **50000.00** | 2550.00 +12.5% | 1ನೇದರ್ಜೆ | 3 ತಿಂಗಳು |
| | **2009-10ನೇ ಸಾಲಿನ ನಗರಸಭೆ ನಿಧಿಯ ಶೇ.22.75% ರಡಿಯಲ್ಲಿ:-** | | | | | |
| | ***ಪ್ಯಾಕೇಜ್ ಸಂ:-02*** | | | | | |
| 1. | ವಾ.ನಂ:18ರಲ್ಲಿ ಅಂಬೇಡಕರ ಭವನದ ಮುಂದುವರೆದ ಕಾಮಗಾರಿ ಅಂದಾಜುಪಟ್ಟಿ ರೂ.100000.00 | | | | | |
| 2. | ವಾ.ನಂ:23 ರ ಅಂಬೇಡಕರ ನಗರದಲ್ಲಿ ಚರಂಡಿ ನಿರ್ಮಾಣ ಅಂದಾಜುಪಟ್ಟಿ ರೂ.100000.00 | | | | | |
| 3. | ವಾ.ನಂ:27 ರಲ್ಲಿ ರಸ್ತೆ ನಿರ್ಮಾಣ ಅಂದಾಜುಪಟ್ಟಿ ರೂ.100000.00 | | | | | |
| | | 3.00 | **7500.00** | 500.00 +12.5% | 3ನೇದರ್ಜೆ & ಮೇಲ್ಪಟ್ಟು | 3 ತಿಂಗಳು |
| | **2008-09ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಅನುದಾನದಡಿಯಲ್ಲಿ:-** | | | | | |
| | ***ಪ್ಯಾಕೇಜ್ ಸಂ:-03*** | | | | | |
| 1. | ಗಂಗಾವತಿ ನಗರದ ತಾಲೂಕು ಕಛೇರಿಯ ಮಳೆ ನೀರು ಕೊಯ್ಲು ಮಾಡುವ ಕಾಮಗಾರಿ. | | | | | |
| | | 3.00 | **7500.00** | 500.00 +12.5% | 3ನೇದರ್ಜೆ & ಮೇಲ್ಪಟ್ಟು | 1 ತಿಂಗಳು |

ಷರತ್ತುಗಳು:-

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಟೆಂಡರ್ ಫಾರಂ ಪಡೆಯಬಹುದು. ಅರ್ಜಿಯನ್ನು ಸಲ್ಲಿಸುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆ ನೋಂದಾಯಿತವಾಗಿರುವ ಬಗ್ಗೆ ಪ್ರಮಾಣಪತ್ರವನ್ನು ಹಾಜರುಪಡಿಸಿ ದಾಖಲಾತಿ ಪುಸ್ತಕ (ಪಾಸ್‌ಪುಸ್ತಕ) ದಲ್ಲಿ ದಾಖಲಾತಿಯನ್ನು ಮಾಡಿಸಿಕೊಳ್ಳಬೇಕು. ನಗರಸಭೆಯಲ್ಲಿ ಗುತ್ತಿಗೆದಾರರು ನೋಂದಣಿ ಮಾಡಿದ ಲೈಸೆನ್ಸ್ ಸಹ ಹೊಂದಿರತಕ್ಕದ್ದು.
2. ಇ.ಎಂ.ಡಿ. ಮೊತ್ತವನ್ನು ಪೌರಾಯುಕ್ತರು, ನಗರಸಭೆ ಗಂಗಾವತಿ ಇವರಿಗೆ ಸಂದಾಯವಾಗುವಂತೆ ಡಿ.ಡಿ.ರೂಪದಲ್ಲಿ ಟೆಂಡರ್‌ನೊಂದಿಗೆ ಸಲ್ಲಿಸತಕ್ಕದ್ದು. ಎನ್.ಎಸ್.ಸಿ. ಮತ್ತು ಚೆಕ್‌ಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಟೆಂಡರ್ ಫಾರಂನಲ್ಲಿ ದರಗಳನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳಂದು ಸರಕಾರಿ ರಜಾದಿನವೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವುದೆ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಮೇಲಿನ ಕಾಮಗಾರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು.
9. ಗುತ್ತಿಗೆದಾರರು ಕೆಲಸ ನಿರ್ವಹಿಸುವ ಸಮಯದಲ್ಲಿ ಕೆಲಸ ನಿರ್ವಹಿಸುವ ಮುನ್ನ, ಕೆಲಸ ನಿರ್ಮಾಣದ ಹಂತ ಹಾಗೂ ಮುಕ್ತಾಯಗೊಂಡ ನಂತರದ ಛಾಯಾಚಿತ್ರಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ತೆಗೆದು ಹಾಜರುಪಡಿಸತಕ್ಕದ್ದು.
10. ಟೆಂಡರ್‌ನೊಂದಿಗೆ 5 ವರ್ಷದ ವಹಿವಾಟು ವಿವರಣಾ ಪಟ್ಟಿಯನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ದೃಢೀಕರಿಸಿ ಹಾಗೂ ವರ್ಕ್ ಇನ್ ಹ್ಯಾಂಡ್ ಪಟ್ಟಿಯನ್ನು ಕಾರ್ಯಪಾಲಕ ಅಭಿಯಂತರರ ಸಹಿ ಮಾಡಿ ಸಲ್ಲಿಸಬೇಕು.
11. ಸರ್ಕಾರದ ಸುತ್ತೋಲೆ ಸಂ:ನಅಇ/10/ಎಸ್‌ಎಫ್‌ಸಿ/2007, ದಿನಾಂಕ: 19-1-2007 ರನ್ವಯ ಕಾಮಗಾರಿಗಳನ್ನು ಅಧಿಕೃತವಾಗಿ ನೇಮಕಗೊಂಡ 3ನೇ ವ್ಯಕ್ತಿಯಿಂದ ತಪಾಸಣೆಗೆ ಒಳಪಟ್ಟಿರುತ್ತದೆ ಹಾಗೂ ಕಾಮಗಾರಿ ಮುಕ್ತಾಯಗೊಂಡ ನಂತರ ಬಿಲ್ ಮಾಡುವ ಸಮಯದಲ್ಲಿ 3ನೇ ವ್ಯಕ್ತಿಯ ಪರಿಶೀಲನಾ ವರದಿ ಪಡೆದ ನಂತರ ಹಣ ಸಂದಾಯ ಮಾಡಲಾಗುವುದು.
12. ಮೇಲಿನ ಕಾಮಗಾರಿಗಳಲ್ಲಿ ರೂ.20.00 ಲಕ್ಷಕ್ಕಿಂತ ಮೇಲ್ಪಟ್ಟ ಅಂದಾಜಿನ ಕಾಮಗಾರಿಗಳಿಗಾಗಿ ಟೆಂಡರ್‌ದಾರರು ತಮ್ಮ ಹೆಸರಿನಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಅಂದಾಜು ಮೊತ್ತದ ಎರಡರಷ್ಟು ಅಂದಾಜಿನ ಕಾಮಗಾರಿಗಳನ್ನು ಕಳೆದ 2 ಆರ್ಥಿಕ ಸಾಲಿನಲ್ಲಿ ವಹಿವಾಟು ಮಾಡಿರತಕ್ಕದ್ದು ಹಾಗೂ ಒಂದು ವರ್ಷದಲ್ಲಿ ಅಂದಾಜುಮೊತ್ತದ ಶೇ.50 ರಷ್ಟು ಮೊತ್ತದ ಟೆಂಡರ್ ಹಾಕಲು ಉದ್ದೇಶಿಸಿರುವ ಕಾಮಗಾರಿಯಂತಹ ಕಾಮಗಾರಿಯನ್ನು ತೃಪ್ತಿಕರವಾಗಿ ಮಾಡಿರತಕ್ಕದ್ದು.
13. ಟೆಂಡರ್‌ದಾರರು ಜಂಟಿಯಾಗಿ (ಇನ್ನೋರ್ವ ಗುತ್ತಿಗೆದಾರರೊಂದಿಗೆ) ಭಾಗವಹಿಸಲು ಅವಕಾಶವಿಲ್ಲ.
14. ಈ ಕಾಮಗಾರಿಗಳನ್ನು ಕಾರ್ಯಾದೇಶ ನೀಡಿದ ದಿನಾಂಕದಿಂದ 15 ದಿನದೊಳಗೆ ಕಡ್ಡಾಯವಾಗಿ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದು.
15. ಕಾಮಗಾರಿ ಪೂರ್ಣಗೊಳಿಸಿದ ನಂತರ 2 ವರ್ಷದ ಅವಧಿವರೆಗೆ ಕಾಮಗಾರಿಯಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಗುತ್ತೇದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸಿಕೊಡತಕ್ಕದ್ದು.
16. ಗುತ್ತೇದಾರರ ಬಿಲ್ಲಿನಲ್ಲಿ ಹಾಲಿ ಕಟಾಯಿಸುತ್ತಿರುವ ವಿವಿಧ ತೆರಿಗೆಗಳ ಜೊತೆಗೆ ಶೇ.1 ರಷ್ಟು ಕಟ್ಟಡ ಮತ್ತು ಇತರೆ ನಿರ್ಮಾಣದ ಕೆಲಸಗಾರರ ಕ್ಷೇಮಾಭಿವೃದ್ಧಿ ಸೆಸ್ಸನ್ನು ಬಿಲ್ಲಿನಲ್ಲಿ ಕಟಾವುಗೊಳಿಸಲಾಗುವುದು.
17. ಟೆಂಡರ್ ಫಾರಂ ಹಣವನ್ನು ಮರುಪಾವತಿ ಮಾಡಲಾಗುವುದಿಲ್ಲ.
18. ಟೆಂಡರ್ ಫಾರಂನಲ್ಲಿ ಕಡಿಮೆ ದರ ಸೂಚಿಸಿದ ದರಕ್ಕೆ ವ್ಯತ್ಯಾಸದ ಹಣಕ್ಕೆ ಡಿ.ಡಿ. ಲಗತ್ತಿಸತಕ್ಕದ್ದು.
19. ಟೆಂಡರ್ ಮಂಜೂರಿಯಾದ ತಕ್ಷಣ ಟೆಂಡರ್ ಮೊತ್ತದ ಶೇ.5% ರಷ್ಟು ಹಣ ಸೆಕ್ಯುರಿಟಿ ಡಿಪಾಜಿಟ್ ಕಟ್ಟಬೇಕು.
20. ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಕ್ರಮವಾಗಿ ಕಾಮಗಾರಿಗಳ ಕಾರ್ಯ ಆದೇಶ ನೀಡಲಾಗುವುದು.
21. ಇನ್ನಿತರೆ ಕರಾರು/ಷರತ್ತುಗಳು ಸ್ಟ್ಯಾಂಡರ್ಡ್ ಡಾಕ್ಯುಮೆಂಟರಿ ಕೆ.ಡಬ್ಲ್ಯು-2 ಟೆಂಡರ್ ಫಾರಂನಲ್ಲಿದ್ದಂತೆ ನಡೆದುಕೊಳ್ಳಬೇಕಾಗುವುದು.
22. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.gangavathicity.gov.in ಹಾಗೂ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಅಧ್ಯಕ್ಷರು,
ನಗರಸಭೆ ಗಂಗಾವತಿ.

ಪೌರಾಯುಕ್ತರು,
ನಗರಸಭೆ ಗಂಗಾವತಿ.